ಸಿಸಿ ನಂಃ 5587/2021
ಸಿ.ಡ್ಯ್ಲೂ 10/ಪಿ.ಡಬ್ಲ್ಯೂ 6

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ**

**ಧಾರವಾಡ.**

**ಸಿಸಿ ನಂಃ 5587/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮೆಹಬೂಬಸಾಬ ನದಾಫ |
| ತಂದೆಯ ಹೆಸರು | ಃ | ಫಕ್ರೂಸಾಬ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ಪೋಲಿಸ್ ಮುಖ್ಯ ಪೇದೆ, ಉಪನಗರ ಪೋಲಿಸ್ ಠಾಣೆ |
| ವಾಸ ಸ್ಥಳ | ಃ | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 17-10-2023

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು 2017 ರಿಂದ 2021 ವರೆಗೆ ವಿದ್ಯಾಗಿರಿ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ .

ದಿಃ 30-06-2021 ರಂದು ನಮ್ಮ ಠಾಣಾ ಗುನ್ನಾ ನಂಃ 81/2021 ರ ಶಂಕಿತ ಆರೋಪಿತನ ಮಾಹಿತಿ ಸಂಗ್ರಹಿಸಲು ನನಗೆ ಮತ್ತು ಚಾಸಾ -11 ರವರನ್ನು

ಸಿಸಿ ನಂಃ 5587/2021
ಸಿ.ಡ್ಯೂ 10/ಪಿ.ಡಬ್ಲ್ಯೂ 6

ನೇಮಿಸಿದ್ದರು . ಅದರಂತೆ ನಾವು ಬೆಃ 6.00 ಗಂಟೆಗೆ ಠಾಣೆಗೆ ವರದಿ ಮಾಡಿಕೊಂಡು ಸದರಿ ಆರೋಪಿತನ ಪತ್ತೆಗಾಗಿ ದಸ್ತು ಕರ್ತವ್ಯಕ್ಕೆ ಹೋಗಿ ಸತ್ತೂರ ಕಡೆಗೆ ಹೋಗುವಾಗ ನಮ್ಮ ಬಾತ್ಮಿದಾರರು ಒಬ್ಬರು ನಮಗೆ ಕರೆ ಮಾಡಿ ಶಂಕಿತ ಆರೋಪಿ ತನ್ನ ಮನೆಯಿಂದ ಉದಯಗಿರಿ ಡಬಲ್ ರೋಡ್ ಕಡೆಗೆ ಮೋಟರ್ ಸೈಕಲ್ ಮೇಲೆ ಹೋಗುತ್ತಿದ್ದಾನೆ ಎಂದು ಮಾಹಿತಿ ನೀಡಿದ್ದರು . ಆದ್ದರಿಂದ ನಾವು ನಮ್ಮ ಸಿಬ್ಬಂದಿಯಾದ ಚಾಸಾ –12 ರವರನ್ನು ಮತ್ತು ಈರಣ್ಣ ಬುರ್ಜಿ ಎನ್ನುವ ಸಹೋದ್ಯೋಗಿಯನ್ನು ಕರೆಸಿಕೊಂಡು ಸದರಿ ಡಬಲ್ ರೋಡ ಹತ್ತಿರ ಹೋಗಿ ವಾಡ್ ಮಾಡುತ್ತಿದ್ದಾಗ ಉದಯಗಿರಿ ಕಡೆಯಿಂದ ಸದರಿ ಶಂಕಿತ ಆರೋಪಿ ಬರುತ್ತಿದ್ದ . ನಾವು ಆತನನ್ನು ಕೈ ಮಾಡಿ ನಿಲ್ಲಿಸಲು ಹೇಳಿದಾಗ ಆತ ಓಡಿ ಹೋಗಲು ಪ್ರಯತ್ನಿಸಿದ್ದ . ಆಗ ನಾವೆಲ್ಲರೂ ಸೇರಿ ಆತನನ್ನು ಹಿಡಿದು ಹೆಸರು , ವಿಳಾಸ ವಿಚಾರಿಸಲಾಗಿ ಆತ ತನ್ನ ಹೆಸರು ಗೋವಿಂದ ಭೀಮಪ್ಪ ಬಂಗಾರಿ , ಸಾಃ ತಡಸಿನಕೊಪ್ಪ , ಗೌಡರ ಓಣಿ ಎಂದು ತಿಳಿಸಿದ್ದ . ನಾವು ಆತನನ್ನು ಮತ್ತು ಆತನ ಮೋಟರ್ ಸೈಕಲ್ ನೊಂದಿಗೆ ಠಾಣೆಗೆ ಕರೆದುಕೊಂಡು ಹೋಗಿ ಚಾಸಾ –14 ರವರ ಮುಂದೆ ಹಾಜರುಪಡಿಸಿದ್ದೆವು . ಚಾಸಾ–14 ರವರು ಆತನನ್ನು ವಿಚಾರಿಸಿದಾಗ ಆತ ತಾನು ಸದರಿ ಗುನ್ನಾ ನಂಬರನಲ್ಲಿ ಹೇಳಿರುವ ಗುನ್ಹೆ ಎಸಗಿರುವುದಾಗಿ ತಿಳಿಸಿದ್ದ . ಆತನ ಹತ್ತಿರ 3,500/– ಹಣ ಮತ್ತು ಪ್ಯಾನ್ ಕಾರ್ಡ ಝೇರಾಕ್ಸ ಪ್ರತಿ ಇತ್ತು . ಆತನ ಹತ್ತಿರ ಹಿರೋ ಕಂಪನಿಯ ಡಿಲಕ್ಸ ಮೋಟರ್ ಸೈಕಲ್ ಇತ್ತು . ಅದರ ನಂಬರ ಕೆಎ–25/ಎಚ್ ಡಿ–5524 ಇತ್ತು . ಅದು ಕಪ್ಪು ಬಣ್ಣದ್ದಾಗಿತ್ತು . ಸದರಿ ಆರೋಪಿ ಸದರಿ ಹಣ ಮತ್ತು

ಪ್ಯಾನ್ ಕಾರ್ಡ ಪ್ರತಿ ಪಿರ್ಯಾದುದಾರನಿಂದ ದೋಚಿಕೊಂಡಿದ್ದಾನೆ ಎಂದು ಮತ್ತ ಸದರಿ ಕೃತ್ಯಕ್ಕೆ ಸದರಿ ಮೋಟರ್ ಸೈಕಲ್ ಬಳಸಿದ್ದಾನೆ ಎಂದು ಗೊತ್ತಾಗಿತ್ತು . ಚಾಸಾ–14 ರವರು ಇಬ್ಬರು ಪಂಚರನ್ನು ಕರೆಸಿ ಸದರಿ ನಗದು ಹಣ ಮತ್ತು ಪ್ಯಾನ್ ಕಾರ್ಡ ಝೇರಾಕ್ಸ ಪ್ರತಿ ಮತ್ತು ಮೋಟರ್ ಸೈಕಲ್ ಗಳನ್ನು ಜಪ್ತುಪಡಿಸಿಕೊಂಡು ಪಂಚನಾಮೆ ಮಾಡಿದ್ದರು . ಆ ದಿನ ನಾವು ಹಿಡಿದಿದ್ದ ಆರೋಪಿತನನ್ನು ನೋಡಿದರೆ ಗುರುತಿಸುತ್ತೇ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿ ಆ ದಿನ ನಾವು ಹಿಡಿದಿರುವ ಆರೋಪಿತನಾಗಿದ್ದಾನೆ ಎಂದು ಗುರುತಿಸಿರುತ್ತಾರೆ . ಆ ದಿನ ಜಪ್ತುಪಡಿಸಿಕೊಂಡ ನಗದು ಹಣ ಮತ್ತು ಪ್ಯಾನ ಕಾರ್ಡ ಝೇರಾಕ್ಸ ಪ್ರತಿ ಈಗ ನಾನು ನೋಡುತ್ತಿರುವ ನಿಶಾನೆ–ಪಿ–11 ರ ಪೋಟೋದಲ್ಲಿರುವ ನಗದು ಹಣ ಮತ್ತು ಪ್ಯಾನ್ ಕಾರ್ಡ ಝೇರಾಕ್ಸ ಪ್ರತಿಗಳಾಗಿವೆ . ಆ ದಿನ ನಾವು ಹಿಡಿದಿದ್ದ ಮೋಟರ್ ಸೈಕಲ್ ಈಗ ನಾನು ನೋಡುತ್ತಿರುವ ನಿಶಾನೆ–ಪಿ–7 ಮತ್ತು 9 ರಲ್ಲಿರುವ ಮೋಟರ್ ಸೈಕಲ್ ಆಗಿದೆ.

**ಪಾಟೀಸವಾಲುಃ ಆರೋಪಿ ಪರ ವಕೀಲರು ತಾನು ಪ್ರಕರಣದಿಂದ ನಿವೃತ್ತಿ ಹೊಂದಿರುವುದಾಗಿ ಮತ್ತು ಪಾಟೀಸವಾಲು ಮಾಡವುದಿಲ್ಲ ಎಂದು ಹೇಳಿದ್ದು , ಆರೋಪಿ ಸಹ ತನಗೆ ಯಾವುದೇ ಪ್ರಶ್ನೆ ಕೇಳುವುದು ಇಲ್ಲ ಎಂದು ಹೇಳಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

**ಮರುವಿಚಾರಣೆ ಃ ಇಲ್ಲ** .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.